**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 12/2025**

**ಚಾ.ಸಾ. :-2**
**ಪ್ರಾ.ಸಾ. :-2**

ಹೆಸರು : ಕೃಷ್ಣ

ತಂದೆಯ ಹೆಸರು : ಜವನಯ್ಯ

ವಯಸ್ಸು : 55 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ನೀಲನಕೊಪ್ಪಲು ಗ್ರಾಮ

---

**ಪ್ರಮಾಣೀಕರಿಸಲಾದ ದಿನಾಂಕಃ- 19.01.2026**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಮೃತ ರವಿ ಹಾಗೂ ನಾನು ಚಾ.ಸಾ-1 ರವರು ಚಾಲಕನಾಗಿ ಕೆಲಸ ಮಾಡುತ್ತಿದ್ದ ಲಾರಿಯಲ್ಲಿ ಲೋಡರ್ ಆಗಿ ಕೆಲಸ ಮಾಡುತ್ತಿದ್ದೆವು. ದಿನಾಂಕಃ 17.02.2025 ರಂದು ಕಾಳೇನಹಳ್ಳಿಯಲ್ಲಿರುವ ಅಫ್ಜಲ್ ರವರ ಕೋರೆಯಿಂದ ಬೋಡರ್ಸ್ ಕಲ್ಲುಗಳನ್ನು ತುಂಬಿಕೊಂಡು ಮೈಸೂರಿಗೆ ಹೋಗುತ್ತಿದ್ದೆವು. ರಸ್ತೆ ಮಧ್ಯೆದಲ್ಲಿ ನಮ್ಮ ಲಾರಿಯ ಫ್ಯಾನ್ ಬ್ಲೇಡ್ ತುಂಡಾಗಿದ್ದು ಚಾ.ಸಾ-1 ರವರು ಆ ಸಮಯದಲ್ಲಿ ಲಾರಿಯನ್ನು ನಿಲ್ಲಿಸಿದರು. 4 ಬದಿಯ ಇಂಡಿಕೇಟರ್ ಗಳನ್ನು ಆನ್ ಮಾಡಿರುತ್ತಾರೆ. ಸುಮಾರು 10 ಅಡಿ ದೂರದಲ್ಲಿ ಮೃತ ರವಿಯವರನ್ನು ನಮ್ಮ ಲಾರಿಯ ಹಿಂಭಾಗದಲ್ಲಿ ನಿಲ್ಲಿಸಿ ಬರುತ್ತಿದ್ದ ವಾಹನಗಳಿಗೆ ಸೂಚನೆ ನೀಡುವಂತೆ ಹೇಳಿದ್ದೆವು. ಚಾ.ಸಾ-1 ರವರು ಮತ್ತು ನಾನು ಲಾರಿಯ ಮುಂಭಾಗದಲ್ಲಿ ಕೆಟ್ಟು ಹೋಗಿದ್ದ ಫ್ಯಾನನ್ನು ರಿಪೇರಿ ಮಾಡುತ್ತಿದ್ದೆವು. ಆ ಸಮಯದಲ್ಲಿ

ಹಿಂದಿನಿಂದ ವೇಗವಾಗಿ ಬಂದಂತಹ ಇನ್ನೊಂದು ಲಾರಿ ನಮ್ಮ ಲಾರಿಗೆ ಗುದ್ದಿರುತ್ತದೆ. ಸದರಿ ಲಾರಿ ಮೊದಲು ರವಿರವರಿಗೆ ಗುದ್ದಿ ನಂತರ ನಮ್ಮ ಲಾರಿಗೂ ಗುದ್ದಿರುತ್ತದೆ. ರವಿರವರು ಮೊಬೈಲ್‌ನಲ್ಲಿ ಟಾರ್ಚ್ ಹಾಕಿಕೊಂಡು ಹಿಂಭಾಗದಲ್ಲಿ ಬರುತ್ತಿದ್ದ ವಾಹನಗಳಿಗೆ ಸೂಚನೆ ನೀಡುತ್ತಿದ್ದರು. ಅಪಘಾತವಾದ ನಂತರ ನಮ್ಮ ಲಾರಿ ಮುಂದೆ ಬಂದು ನನಗೆ ಗುದ್ದಿ ಗಾಯಪಡಿಸಿರುತ್ತದೆ. ಅಪಘಾತಪಡಿಸಿದ ಲಾರಿಯ ಎಡಭಾಗ ನಮ್ಮ ಲಾರಿಯ ಹಿಂಭಾಗದ ಬಲಭಾಗಕ್ಕೆ ಡಿಕ್ಕಿಪಡಿಸಿರುತ್ತದೆ.

ನಮ್ಮ ಲಾರಿಯನ್ನು ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿದ್ದು, ಆ ರಸ್ತೆಯಲ್ಲಿ ಒಂದೇ ಸಮಯದಲ್ಲಿ 3 ವಾಹನಗಳು ಹೋಗುವಷ್ಟು ಜಾಗ ಇತ್ತು. ಆ ಸಮಯದಲ್ಲಿ ರಸ್ತೆಯಲ್ಲಿ ವಾಹನ ಸಂಚಾರ ಕಡಿಮೆ ಇತ್ತು.

ನಂತರ ನನ್ನನ್ನು ಆ್ಯಂಬುಲೆನ್ಸ್ ಮೂಲಕ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಅಪಘಾತವಾದ ನಂತರ ನನಗೆ ಪ್ರಜ್ಞೆ ಇರಲಿಲ್ಲ, ನಂತರ ಅಪಘಾತದ ಬಗ್ಗೆ ಬೇರೆಯವರು ಹೇಳಿರುತ್ತಾರೆ. ರವಿರವರು ಚಿಕಿತ್ಸೆ ಫಲಕಾರಿಯಾಗದೇ ಅದೇ ದಿನ ಮೃತಪಟ್ಟಿರುತ್ತಾರೆ.

ಸಾಕ್ಷಿಯು ವಾಹನಗಳ 6 ಫೋಟೋಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಈಗಾಗಲೇ ಒಟ್ಟಾಗಿ ನಿಪಿ-3 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>**

ಅಪಘಾತ ಸಮಯದಲ್ಲಿ ನಾನು ಮತ್ತು ಚಾ.ಸಾ-1 ಲಾರಿಯ ಮುಂಭಾಗದಲ್ಲಿ ನಿಂತಿದ್ದೆವು. ನಾವು ಮುಂಭಾಗದಲ್ಲಿ ನಿಂತಿದ್ದ ಕಾರಣ ಹಿಂಭಾಗದಲ್ಲಿ ಬಂದಂತಹ ಲಾರಿಯು ಹೇಗೆ ಬಂದಿರುತ್ತದೆ ಎಂದು ನಾನು ನೇರವಾಗಿ ನೋಡಿಲ್ಲ ಎಂದರೆ ಸರಿ.

ಮೃತ ರವಿರವರು ಆ ದಿನ ಮದ್ಯಪಾನ ಮಾಡಿದ್ದರು ಎಂದರೆ ಸುಳ್ಳು. ಮೃತ ರವಿರವರು ಮದ್ಯಪಾನ ಮಾಡಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ರಸ್ತೆ ಎಕ್ಸ್ಪ್ರೆಸ್ ಹೆದ್ದಾರಿಯಾಗಿರುತ್ತದೆ. ನಮ್ಮ ಲಾರಿ ಕೆಟ್ಟಾಗ ನಾವು ಹೆದ್ದಾರಿಯ ಟೋಲ್ ಫ್ರೀ ನಂಬರ್ ಗೆ ಕರೆ ಮಾಡಿಲ್ಲ. ಸದರಿ ಹೆದ್ದಾರಿಯಲ್ಲಿ ವಾಹನಗಳನ್ನು ನಿಲ್ಲಿಸಬಾರದು ಹಾಗೂ ವಾಹನದಿಂದ ಕೆಳಗಿಳಿದು ರಸ್ತೆಯಲ್ಲಿ ಓಡಾಡಬಾರದು ಎಂದು ಸೂಚನಾ ಫಲಕಗಳನ್ನು ಅಳವಡಿಸಿರುತ್ತಾರೆ ಎಂದರೆ ಸರಿ.

ನಾನು ಪೊಲೀಸರಿಗೆ ಆಸ್ಪತ್ರೆಯಲ್ಲಿ ಹೇಳಿಕೆ ಕೊಟ್ಟಿರುತ್ತೇನೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸುಳ್ಳು. ನನಗೆ ಯಾವುದೇ ಗಾಯಗಳಾಗಿಲ್ಲ ಎಂದರೆ ಸರಿಯಲ್ಲ. ವಿಮೆ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಿಮೆ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ.

ರವಿರವರು ಮದ್ಯಪಾನ ಮಾಡಿದ್ದು ರಸ್ತೆಯಲ್ಲಿ ಅಡ್ಡ ಬಂದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸುಳ್ಳು. ಚಾ.ಸಾ-1 ರವರ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸುಳ್ಳು. ಆರೋಪಿಯ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸುಳ್ಳು.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**